ದಿನಾಂಕಃ **11.06.2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ವಾದಿ ಪರ ವಕೀಲರಾದ ಶ್ರೀ ಎಂ.ಟಿ.ಆರ್. ರವರಿಂದ ಃ

**1.** ನಾನು 8 ನೇ ತರಗತಿ ವರೆಗೂ ಓದಿದ್ದೇನೆ. ದಾವೆಯ ಅಂಶಗಳು ನನಗೆ ಗೊತ್ತು. ವಾದಿ ನನ್ನ ಚಿಕ್ಕಪ್ಪ ಎಂದರೆ ಸರಿ. ನನ್ನ ತಂದೆ ಮತ್ತು ಚಿಕ್ಕಪ್ಪ ಯಾವಾಗ ವಿಭಾಗ ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಿಃ30.10.1980 ರಂದು ನನ್ನ ತಂದೆ ಮತ್ತು ಚಿಕ್ಕಪ್ಪ, ಅಜ್ಜಿಯ ನಡುವೆ ವಿಭಾಗವಾಗಿದ್ದು ಒಟ್ಟು ಆರು ಸ್ವತ್ತುಗಳು ನನ್ನ ತಂದೆಯ ಪಾಲಿಗೆ ಬಂದಿದೆ ಎಂದರೆ ಸರಿ. ನನ್ನ ಚಿಕ್ಕಪ್ಪನಿಗೆ ಐದು ಸ್ವತ್ತುಗಳು ಬಂದಿವೆ ಎಂದರೆ ಸಾಕ್ಷಿಯು ನನ್ನ ತಂದೆಗೆ ಬಂದಂತಹ ಎಲ್ಲ ಸ್ವತ್ತುಗಳಲ್ಲಿ ಸಮಭಾಗ ನನ್ನ ಚಿಕ್ಕಪ್ಪನಿಗೂ ಹೋಗಿದೆ ಎಂದು ನುಡಿಯುತ್ತಾರೆ. ನನ್ನ ಅಜ್ಜಿಗೆ ಒಂದು ಸ್ವತ್ತನ್ನು ವಿಭಾಗದಂತೆ ಕೊಟ್ಟಿದ್ದಾರೆ ಎಂದರೆ ಸರಿ. ದಾವಾ ಸರ್ವೇ ನಂಃ209 ರಲ್ಲಿ 1 ಎಕರೆ 2 ಗುಂಟೆ ನನ್ನ ತಂದೆಗೆ ಬಂದಿದೆ ಎಂದರೆ ಸರಿ. ಅದೇ ರೀತಿ ನನ್ನ ಚಿಕ್ಕಪ್ಪ ವಾದಿಗೆ ದಾವಾ ಸರ್ವೇ ನಂಃ209 ರಲ್ಲಿ 1 ಎಕರೆ 2 ಗುಂಟೆ ಬಂದಿದೆ ಎಂದರೆ ಸರಿ. ವಿಭಾಗ ಆದಾಗಿನಿಂದ ನನ್ನ ತಂದೆ ಮತ್ತು ಚಿಕ್ಕಪ್ಪ ತಮ್ಮ ಹಿಸ್ಸಾ ಸ್ವತ್ತಿನಲ್ಲಿ ಪ್ರತ್ಯೇಕವಾಗಿ ಸ್ವಾಧೀನದಲ್ಲಿದ್ದುಕೊಂಡು ಬರುತ್ತಿದ್ದಾರೆ ಎಂದರೆ ಸರಿ. ಅದೇ ರೀತಿ ಹಿಸ್ಸಾ ಸ್ವತ್ತಿಗೆ ಪಹಣಿಗಳು ಬಂದಿವೆ ಎಂದರೆ ಸರಿ. ಸಾಕ್ಷಿಯು ಸರ್ವೇ ನಂಃ209 ಕ್ಕೆ ಯಾವುದೇ ಪಹಣಿಯಾಗಿಲ್ಲ ಎಂದು ನುಡಿಯುತ್ತಾರೆ. ನನ್ನ ತಾತನ ಹೆಸರು ಚೆನ್ನೇಗೌಡ. ಅವರ ಹೆಸರಿನಲ್ಲಿ ಸರ್ವೇ ನಂಃ209 ರಲ್ಲಿ 1 ಎಕರೆ 28 ಗುಂಟೆ ಇದ್ದು, ಅದು ಭೂ-ಸ್ವಾಧೀನವಾಗಿದೆ ಎಂದರೆ ಸರಿ. ವಿಭಾಗವಾದ ನಂತರ ನನ್ನ ತಂದೆಯ ಹಿಸ್ಸೆಗೆ ಬಂದ ಸರ್ವೇ ನಂಃ209 ರಲ್ಲಿ 1 ಎಕರೆ 2 ಗುಂಟೆ ಮತ್ತು 20 ಗುಂಟೆ ಖರಾಬು ಸೇರಿ ಭೂ-ಸ್ವಾಧೀನವಾಗಿದೆ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪನಿಗೆ ಸೇರಿದ ಸರ್ವೇ ನಂಃ209 ರಲ್ಲಿ ಕೇವಲ 6 ಗುಂಟೆ ಮಾತ್ರ ಭೂ-ಸ್ವಾಧೀನವಾಗಿದೆ ಎಂದರೆ ಸರಿಯಲ್ಲ.

**2.** ಭೂ-ಸ್ವಾಧೀನವಾದ ಸ್ವತ್ತಿನ ಪರಿಹಾರಕ್ಕಾಗಿ ನನ್ನ ತಂದೆ ಶ್ರೀರಂಗಪಟ್ಟಣ ನ್ಯಾಯಾಲಯದಲ್ಲಿ ಎಲ್.ಎ.ಸಿ. ನಂಃ484/1994 ಎಂದು ದಾವೆ ಸಲ್ಲಿಸಿದ್ದರು ಎಂದರೆ ಸರಿ. ಹೆಚ್ಚಿನ ಪರಿಹಾರಕ್ಕಾಗಿ Ex.No-79/2002 ಸಹ ಸಲ್ಲಿಸಿದ್ದರು ಎಂದರೆ ಸರಿ. 2007 ರ

ವರೆಗೂ ಪಹಣಿಗಳಲ್ಲಿ ನನ್ನ ತಂದೆಯ ಹೆಸರೇ ನಮೂದಾಗಿದೆ ಎಂದರೆ ಸರಿ. ಆ ನಂತರ ವಿ.ಸಿ. ನಾಲೆಗೆಂದು ಭೂ-ಸ್ವಾದೀನ ತೋರಿಸಿದ್ದಾರೆ ಎಂದರೆ ಸರಿಯಲ್ಲ. ಆ ನಂತರದ ಪಹಣಿಗಳನ್ನು ನಾನು ಪಡೆದುಕೊಂಡಿಲ್ಲ. ವಾದಿಯ ಹಿಸ್ಸಾ ಸ್ವತ್ತಿನ ಚೆಕ್ಕುಬಂದಿ ಪೂಃ ಸಂಪರ್ಕ ನಾಲೆ, ಪಃ ಸರ್ಕಾರಿ ಹಳ್ಳ, ಉಃ ಬಿ.ಸಿ. ನಿಂಗೇಗೌಡರವರ ಜಮೀನು ಎಂದರೆ ಸರಿ. ದಕ್ಷಿಣಕ್ಕೆಃ ಮಂಡ್ಯ-ಪಾಂಡವಪುರ ರಸ್ತೆ ಎಂದರೆ ಸರಿಯಲ್ಲ. ಸಾಕ್ಷಿಯು ವಾದಿಯ ಜಮೀನಿನ ದಕ್ಷಿಣಕ್ಕೆ ಸರ್ಕಾರಿ ಜಮೀನು, ಆ ನಂತರ ಮಂಡ್ಯ-ಪಾಂಡವಪುರ ರಸ್ತೆ ಇದೆ ಎಂದು ನುಡಿಯುತ್ತಾರೆ.

**3**. ನನ್ನ ತಂದೆಗೆ ಬಂದಿರುವ ಹಿಸ್ಸಾ ಸ್ವತ್ತಿನ ಚೆಕ್ಕುಬಂದಿ ಪೂಃ ಸರ್ಕಾರಿ ಬೆಟ್ಟ, ಪಃ ವಾದಿಯ ಹಿಸ್ಸಾ ಜಮೀನು, ಉಃ ಕಾಳಕ್ಕ ಹೊನ್ನೇಗೌಡರ ಜಮೀನು ಪ್ರಸ್ತುತ ನಿಂಗೇಗೌಡರ ಜಮೀನು, ದಃ ಸರ್ಕಾರಿ ಜಮೀನು ಮತ್ತು ಮಂಡ್ಯ-ಪಾಂಡವಪುರ ರಸ್ತೆ ಇದೆ ಎಂದರೆ ಸರಿ. ನನ್ನ ತಂದೆಯ ಮೇಲೆ ಹೇಳಿದ ಹಿಸ್ಸಾ ಸ್ವತ್ತಿನ ಪೂರ್ಣ ಚೆಕ್ಕುಬಂದಿಯ ಸ್ವತ್ತು ಭೂ-ಸ್ವಾದೀನವಾಗಿದೆ ಎಂದರೆ ಸರಿಯಲ್ಲ. ದಿಃ24.12.1991 ರ ವರ್ಗಾ ವರ್ಗಿ ಪತ್ರವನ್ನು ಹಾಜರುಪಡಿಸಿದ್ದೇನೆ. ನಿಡಿ-3 ವರ್ಗಾ ವರ್ಗಿ ಪತ್ರವು ಸರ್ವೆ ನಂಃ209 ರಲ್ಲಿ ಇರುವ ಬಾವಿ ನೀರನ್ನು ಬಳಸಿಕೊಳ್ಳುವ ಬಗ್ಗೆ ಮಾತ್ರ ನಮೂದಾಗಿದೆ ಎಂದರೆ ಸರಿ. ಸದರಿ ವರ್ಗಾ ವರ್ಗಿ ಪತ್ರದಲ್ಲಿ ಸ್ವತ್ತಿನ ವರ್ಗಾವಣೆ ಬಗ್ಗೆ ನಮೂದು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಲಿಖಿತ ಪತ್ರದಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನಾನು ವಾದಿಗೆ ಹಲ್ಲೆ ನಡೆಸಿದ ಕಾರಣ ನನ್ನ ವಿರುದ್ದ ಕ್ರಿಮಿನಲ್ ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ದಿಃ30.04.2009 ರಲ್ಲಿ ನಾನು ವಾದಿಗೆ ಕಾನೂನು ತಿಳುವಳಿಕೆ ನೋಟೀಸು ನೀಡಿದ್ದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನೋಟೀಸಿಗೆ ವಾದಿಯು ಉತ್ತರ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಃ209 ರಲ್ಲಿ ನನಗೆ ಸೇರಿದ ಯಾವುದೇ ಜಮೀನು ಇಲ್ಲದಿದ್ದರು, ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು).**

**ಓ. ಹೇ. ಕೇ. ಸ. ಇದೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಸಾಕ್ಷಿದಾರರ ಸಹಿ.** **ಪಾಂಡವಪುರ.**